**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ;**

**ವಿಷಯ:** ವೈದ್ಯಕೀಯ ಶಿಕ್ಷಣ ಇಲಾಖೆಯು ಯಾವುದೇ ತಜ್ಞರ ಸೇವೆಯನ್ನು ವಿಲೀನಗೊಳ್ಳಬೇಕಾದರೆ ಕರ್ನಾಟಕ ನಾಗರೀಕ ಸೇವಾ ನೇಮಕಾತಿ ನಿಯಮಗಳ ಅಡಿಯಲ್ಲಿ ಮಾಡಿಕೊಳ್ಳಬೇಕಾಗಿದ್ದು, ನೆಫ್ರೋ-ಯುರಾಲಜಿ ಆಡಳಿತ ಮಂಡಳಿಯ ನಿರ್ಣಯದಂತೆ ಸಹಾಯಕ ಪ್ರಾಧ್ಯಾಪಕರಾದ ಡಾ.ಲೀಲಾವತಿ ವಿ. ಇವರ ಸೇವೆಯನ್ನು ಅವರ ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲು ನಿರ್ಣಯಿಸಿ ಅನುಮೋದಿಸಿರುತ್ತದೆ. ಅಲ್ಲದೇ ಈ ಸಂಬಂಧ ನ್ಯಾಯಾಲಯಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆಯು ಪ್ರಮಾಣಪತ್ರ ಸಲ್ಲಿಸಿರುತ್ತದೆ. 16-01-2025ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಸದರಿ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿ ಗೌರವಾನ್ವಿತ ನ್ಯಾಯಾಲಯದ ಆದೇಶ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯದಂತೆ ಡಾ.ಲೀಲಾವತಿ ವಿ. ಇವರ ಸೇವೆಯನ್ನು ಹಿಂದುರಿಗಿಸಲು ಅಗತ್ಯ ಕ್ರಮ ವಹಿಸಲು ಅನುಮೋದಿಸಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು 28-02-2025 ರಂದು ನೀಡಿರುವ ತೀರ್ಪಿಗೆ ಅನುಗುಣವಾಗಿ ಈಗಾಗಲೇ ಇವರಿಗೆ ಹಿಂಬರಹ ನೀಡಲಾಗಿದೆ. ಆದರೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣದ ಕಾರಣದ ಮೇಲೆ ಇವರನ್ನು ಸೇವೆಯಿಂದ ಬಿಡುಗಡೆ ಮಾಡಿರುವುದಿಲ್ಲ. ಇದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇಲಾಖೆಯು ಯಾವುದೇ ನೌಕರರು ಆಡಳಿತ ಮಂಡಳಿಯ ಮೇಲೆ ಸವಾರಿ ಮಾಡಲು ಅವಕಾಶ ನೀಡಬಾರದು. ಆದುದರಿಂದ ಇವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವೆಯಿಂದ ಅವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಲು ತುರ್ತುಕ್ರಮ ಕೈಗೊಳ್ಳಲು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

******

ಸರ್ಕಾರದ ಆದೇಶ ಸಂಖ್ಯೆ: ಆಕುಕ 50 ಎಂಎಸ್ಎಫ್ 2017, ದಿನಾಂಕ:08.02.2018ರನ್ವಯ ನೆಫ್ರೋ-ಯುರಾಲಜಿ ಸಂಸ್ಥೆಯ ಸೇವೆಗೆ ವಿಲೀನಾತಿಗೊಂಡಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರಾದ ಡಾ. ಲೀಲಾವತಿ ವಿ., ಇವರು ತಾವು ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ನಿಯೋಜನೆ ಮೇಲೆ ಸೇರಿದ ದಿನಾಂಕ:13.09.2013 ರಿಂದ ಪೂರ್ವಾನ್ವಯವಾಗಿ ತಮ್ಮ ವಿಲೀನಾತಿಯನ್ನು ಪರಿಗಣಿಸುವಂತೆ ಕೋರಿದ್ದರ ಸಂಬಂಧ, ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿಯು ದಿನಾಂಕ:18.06.2024ರಂದು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

> "ಆಡಳಿತ ಮಂಡಳಿಯು ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸುದೀರ್ಘವಾಗಿ ಚರ್ಚಿಸಿದ್ದು, ಆರೋಗ್ಯ ಇಲಾಖೆಯ ವೈದ್ಯರು ಹಾಗೂ ತಜ್ಞರ ಸೇವೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಅವಶ್ಯವಿಲ್ಲವೆಂದು ಗೌರವಯುತ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿರುವುದನ್ನು ಮತ್ತು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ) ನೇಮಕಾತಿ ನಿಯಮ 1977 ರ ನಿಯಮ 16(ಎ)(ii)ಕ್ಕೆ ತಿದ್ದುಪಡಿ ತಂದು, ಶಾಶ್ವತ ವರ್ಗಾವಣೆ ಮೂಲಕ ಮತ್ತೊಂದು ಇಲಾಖೆಗೆ ವಿಲೀನಗೊಳಿಸುವುದನ್ನು ರದ್ದುಪಡಿಸಿರುವುದನ್ನು ಹಾಗೂ ಈ ಪ್ರಕರಣದ ಸಂಬಂಧ ಕಾನೂನು ಇಲಾಖೆಯು ನೀಡಿರುವ ಸಮಗ್ರ ಅಭಿಪ್ರಾಯವನ್ನು ಪರಿಗಣಿಸಿ, ಬಾಕಿ ಇರುವ ನ್ಯಾಯಾಲಯದ ಪ್ರಕರಗಳಲ್ಲಿನ ಅಂತಿಮ ತೀರ್ಪಿಗೊಳಪಟ್ಟು, ಡಾ. ಲೀಲಾವತಿ ವಿ. ಇವರ ಸೇವೆಯನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲು ನಿರ್ಣಯಿಸಿ, ಅದರಂತೆ ಕ್ರಮ ವಹಿಸಲು ಆಡಳಿತ ಮಂಡಳಿಯು ಅನುಮೋದಿಸಿತು".

ಡಾ.ಲೀಲಾವತಿ ವಿ., ಇವರು ತಮ್ಮ ಸೇವಾ ವಿಲೀನಾತಿಯನ್ನು ದಿನಾಂಕ:13.09.2013 ರಿಂದ ಪೂರ್ವಾನ್ವಯವಾಗಿ ಪರಿಗಣಿಸುವಂತೆ ಕೋರಿ, ಗೌ. ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:12880/2024 ರಲ್ಲಿ ಗೌ. ನ್ಯಾಯಾಲಯವು ದಿನಾಂಕ:25.06.2024 ರಂದು ನೀಡಿರುವ ದೈನಂದಿನ ಆದೇಶದಲ್ಲಿ(Daily Orders) ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತದೆ.

**<u>Date: 25.06.2024:</u>** Sri Srikanth M P, the learned counsel for the petitioner, while inviting this Court's attention to the previous Order dated 18.06.2024, submits that his tentative instructions are that the Governing Council has decided to repatriate the petitioner in its Meeting held on 18.06.2024.

Sri. K.M. Prakash, the learned counsel for the third respondent, submits that he has no instructions as the proceedings of the Meeting are yet to be received. He emphasizes that the Meeting was scheduled to be held on 18.06.2024 and this Court's order was in the closing hours of the Court sitting on the mentioning by Sri. Srikanth M P, and therefore, no exception can be taken if there is a decision.

This Court must observe that indeed it would be so, but then, if a decision is taken because it is made subject to further orders of this Court, it cannot be given effect to.

It is ordered accordingly.

With liberty to the respondents to complete the pleadings and seek vacation of this order, the office is directed to re-list this petition on 15.07.2024.

<u>ಪ್ರಸ್ತುತ, ರಿಟ್ ಅರ್ಜಿ ಸಂಖ್ಯೆ:12880/2024 ಗೌ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ, ಸದರಿ ಪ್ರಕರಣದಲ್ಲಿ ಗೌ.ನ್ಯಾಯಾಲಯವು ನೀಡುವ ಅಂತಿಮ ಆದೇಶವನ್ನು ನಿರೀಕ್ಷಿಸಲಾಗಿದೆ.</u>

ಮುಂದುವರೆದು, ಇದೇ ವಿಷಯವಾಗಿ ಡಾ. ಲೀಲಾವತಿ ವಿ., ಇವರು ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ SLP(civil) ಸಂಖ್ಯೆ:6120/2025 ಪ್ರಕರಣದಲ್ಲಿ ಗೌ. ಸರ್ವೋಚ್ಚ ನ್ಯಾಯಾಲಯವು ದಿನಾಂಕ:28.02.2025ರಂದು ನೀಡಿರುವ ತೀರ್ಪಿನ ಉದ್ಧೃತ ಭಾಗವು ಈ ಕೆಳಕಂಡಂತಿದೆ:-

> "....5. The only direction issued was to consider the petitioner's claim for absorption, which was favourably considered and she was absorbed. The petitioner her self seems to have invited problem by insisting for retrospective absorption. Such a claim, being impermissible in law, has rightly been declined.
>
> 6. We are, however, of the view that repatriation of the petitioner, when she has served the Institute for more than two decades, may not be in public interest. We, accordingly, even without hearing the respondents, grant liberty to the petitioner to submit a representation to the State Government/ Governing Council of the Institute to reconsider their decision dated 18.06.2024 and allow her to continue in the Institute based upon the order of absorption passed earlier. We have no reason to doubt that if the petitioner submits such a representation within one week, the Authorities will consider the same sympathetically."

ಗೌ. ಸರ್ವೋಚ್ಚ ನ್ಯಾಯಾಲಯದ ಆದೇಶದ ನಂತರ ಡಾ. ಲೀಲಾವತಿ ವಿ., ಇವರಿಂದ ಸ್ವೀಕೃತಗೊಂಡ ಮನವಿಗಳಲ್ಲಿ ತಮ್ಮ ವಿಲೀನಾತಿಯನ್ನು ಪೂರ್ವಾನ್ವಯವಾಗಿ ಪರಿಗಣಿಸುವಂತೆ ಕೋರಿದ್ದನ್ನು, ಪರಿಶೀಲಿಸಿದ ನಂತರ, ಪೂರ್ವಾನ್ವಯವಾಗಿ ವಿಲೀನಾತಿಗೊಳಿಸಲು ಅವಕಾಶವಿಲ್ಲದೇ ಇರುವ ಹಿನ್ನೆಲೆಯಲ್ಲಿ, ಅದರಂತೆ, ಸೂಕ್ತ ಹಿಂಬರಹವನ್ನು ಡಾ. ಲೀಲಾವತಿ ವಿ., ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇವರಿಗೆ ನೀಡುವಂತೆ ಸಂಸ್ಥೆಯ ನಿರ್ದೇಶಕರಿಗೆ ಸರ್ಕಾರದ ಪತ್ರ ಸಂಖ್ಯೆ: ಆಕುಕ

12 ಎಂಎಸ್‌ಎಫ್ 2024(ಭಾ-1), ದಿನಾಂಕ: 25.09.2025ರಲ್ಲಿ ತಿಳಿಸಲಾಗಿತ್ತು. ಇದಲ್ಲದೇ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ SPL(CIVIL) ಸಂಖ್ಯೆ:6120/2025 ಪ್ರಕರಣದಲ್ಲಿ ನೀಡಿರುವ ತೀರ್ಪಿನ ಕುರಿತಂತೆ ಸಂಸ್ಥೆಯಿಂದ ಯಾವುದೇ ಕ್ರಮದ ಅಗತ್ಯತೆ ಇರುವುದಿಲ್ಲವೆಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಅಭಿಪ್ರಾಯ ನೀಡಿದ ಹಿನ್ನೆಲೆಯಲ್ಲಿ, ಅದರಂತೆ ಸಂಸ್ಥೆಯ ನಿರ್ದೇಶಕರು ಸದರಿ ವೈದ್ಯರಿಗೆ ಹಿಂಬರಹ ನೀಡಿರುತ್ತಾರೆ.

ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿಯು ದಿನಾಂಕ:18.06.2024ರ ಸಭೆಯಲ್ಲಿ, "ಬಾಕಿ ಇರುವ ನ್ಯಾಯಾಲಯ ಪ್ರಕರಣಗಳಲ್ಲಿನ ಅಂತಿಮ ತೀರ್ಪಿಗೊಳಪಟ್ಟು, ಡಾ. ಲೀಲಾವತಿ ವಿ ಇವರ ಸೇವೆಯನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲು" ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಹಾಗೂ ಗೌ. ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:12880/2024ರಲ್ಲಿ "This Court must observe that indeed it would be so, but then, if a decision is taken because it is made subject to further orders of this Court, it cannot be given effect to." ಎಂದು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ದಿನಾಂಕ:18.06.2024ರ ಆಡಳಿತ ಮಂಡಳಿಯ ನಿರ್ಣಯವನ್ನು ಅನುಷ್ಠಾನಗೊಳಿಸುವ ಕುರಿತು ರಿಟ್ ಅರ್ಜಿ ಸಂಖ್ಯೆ:12880/2024ರಲ್ಲಿನ ಅಂತಿಮ ಆದೇಶವನ್ನು ನಿರೀಕ್ಷಿಸಲಾಗಿದ್ದು, ಅಂತಿಮ ಆದೇಶವಾದ ನಂತರ ಪರಿಶೀಲಿಸಿ, ನಿಯಮಾನುಸಾರ ಸೂಕ್ತ ಕ್ರಮವಹಿಸಲಾಗುವುದು.

**ಸಂಖ್ಯೆ:** ಎಂಇಡಿ 139 ಎಂಎಸ್‌ಎಫ್ 2026

**(ಡಾ. ಶರಣಪ್ರಕಾಶ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.